# ಸುದ್ದಿ ಸಂಚಯ

## ಪುಣೆಯಲ್ಲಿ ನೂತನ ವಿಶ್ವ ಮಂದಿರದ ಉದ್ಘಾಟನೆ

**ಮ**ಹಾರಾಷ್ಟ್ರ ರಾಜ್ಯದ ಪುಣೆಯಲ್ಲಿರುವ ರಾಮಕೃಷ್ಣ ಮಠದಲ್ಲಿ ವಾಸ್ತುಶಿಲ್ಪದ ಒಂದು ಹೊಸ ಮಾದರಿಯ ದೇವಾಲಯವನ್ನು ನಾವೀಗ ಕಾಣಬಹುದಾಗಿದೆ. ಈ ಶ್ರೀರಾಮಕೃಷ್ಣ ದೇವಾಲಯವನ್ನು ೨೦೦೨, ಏಪ್ರಿಲ್ ೨೧ರಂದು ರಾಮಕೃಷ್ಣ ಮಹಾಸಂಘದ ಮಹಾಧ್ಯಕ್ಷರಾದ ಪರಮಪೂಜ್ಯ ಶ್ರೀಮತ್ ಸ್ವಾಮಿ ರಂಗನಾಥಾನಂದಜಿ ಮಹಾರಾಜ್ ಅವರು ಉದ್ಘಾಟಿಸಿದರು.

ಒಂದು ವಾರದ ಈ ವಿಶೇಷ ಸಮಾರಂಭದಲ್ಲಿ ವಿಷ್ಣು ಪಂಚಾಯತನ ಯಾಗ, ವಿಶೇಷ ಪೂಜೆ, ರಾಮನಾಮ ಸಂಕೀರ್ತನೆ, ವೇದಘೋಷ, ಸಾರ್ವಜನಿಕ ಸಭೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ಮರಣ ಸಂಚಿಕೆಯ ಬಿಡುಗಡೆ—ಇವೇ ಮುಂತಾದ ಕಾರ್ಯಕ್ರಮಗಳಿದ್ದವು. ಸುಮಾರು ೩೪೩ ಸಂನ್ಯಾಸಿಗಳು ಇವುಗಳಲ್ಲಿ ಭಾಗವಹಿಸಿದ್ದರು. ಪ್ರತಿದಿನದ ಕಾರ್ಯಕ್ರಮಗಳಲ್ಲಿ ಸುಮಾರು ೫೦೦೦ ಜನ ನೆರೆದಿರುತ್ತಿದ್ದರು. ಉದ್ಘಾಟನೆಯ ಸಮಯದಲ್ಲಿ ೧೫,೦೦೦ ಭಕ್ತರು ನೆರೆದಿದ್ದರು. ಇವರೆಲ್ಲರೂ ದೇಶದ ವಿವಿಧ ಭಾಗಗಳಿಂದ ಬಂದಿದ್ದರು. ಭಕ್ತಿಗೀತೆಗಳನ್ನು ಹಾಡಿದವರಲ್ಲಿ ಪ್ರಧಾನರಾದವರು ದೆಹಲಿಯ ಪಂಡಿತ ರಾಜನ್ ಮಿಶ್ರ-ಸಾಜನ್ ಮಿಶ್ರ ಹಾಗೂ ಮುಂಬೈನ ಶ್ರೀ ಅನುಪ್ ಜಲೋಟ.

೧೯.೦೪.೨೦೦೨ರ ಸಾರ್ವಜನಿಕ ಸಭೆಯಲ್ಲಿ ಸ್ವಾಮಿಗಳಾದ ಗೌತಮಾನಂದರು, ನಿಖಿಲಾತ್ಮಾನಂದರು, ಸತ್ಯರೂಪಾ ನಂದರು ಮಾತನಾಡಿ ದೇವಾಲಯದ ಪ್ರಾಮುಖ್ಯ ಮತ್ತು ಆವಶ್ಯಕತೆಯ ಬಗ್ಗೆ ತಿಳಿಸಿದರು. ೨೦.೦೪.೨೦೦೨ರಂದು ನಡೆದ "ಸ್ವಾಮಿ ವಿವೇಕಾನಂದ ಮತ್ತು ಆಧುನಿಕ ಯುಗ" ಎಂಬ ವಿಚಾರ ಸಂಕಿರಣದಲ್ಲಿ ಸ್ವಾಮಿಗಳಾದ ಜಿತಾತ್ಮಾನಂದ ಮತ್ತು ನಿಖಿಲೇಶ್ವರಾನಂದರೂ ಆಚಾರ್ಯ ಕಿಶೋರ್‌ಜಿ ವ್ಯಾಸರೂ ಹಾಗೂ ಡಾ. ಓಂಪ್ರಕಾಶ ವರ್ಮರೂ ಭಾಗವಹಿಸಿದ್ದರು. ಅದೇ ದಿನ ನಡೆದ ಸಾರ್ವಜನಿಕ ಸಭೆಯ ವಿಷಯ "ಮಹಾರಾಷ್ಟ್ರದ ಸಂತರು". ಸಭಾಧ್ಯಕ್ಷತೆಯನ್ನು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗಹನಾನಂದಜಿಯವರು ವಹಿಸಿದ್ದರು. ಅನೇಕ ವಿದ್ವಾಂಸರು ಈ ಸಂದರ್ಭದಲ್ಲಿ ಮಾತನಾಡಿದರು.

೨೧ರಂದು ಮುಂಜಾವಿನಿಂದಲೇ ನೂತನ ಮಂದಿರದ ಮುಂಭಾಗದ ವಿಶಾಲವಾದ ಅಂಗಳದಲ್ಲಿ ಸಮಾವೇಶಗೊಂಡಿದ್ದ ಅಪಾರ ಭಕ್ತ ಸ್ತೋಮ ಮಂದಿರದ ಉದ್ಘಾಟನೆಯ ಕ್ಷಣಗಳಿಗಾಗಿ ಎದುರು ನೋಡುತ್ತಿದ್ದರು. ಹಳೆಯ ಪೂಜಾಗೃಹದಲ್ಲಿ ಪೂಜಿಸಲಾಗುತ್ತಿದ್ದ ಶ್ರೀರಾಮಕೃಷ್ಣರ, ಶ್ರೀಮಹಾಮಾತೆಯವರ ಹಾಗೂ ಸ್ವಾಮೀಜಿಯವರ ಭಾವಚಿತ್ರಗಳನ್ನು ರಾಮಕೃಷ್ಣ ಮಹಾಸಂಘದ ಹಿರಿಯ ಸಾಧುಗಳು ಭಕ್ತಿಶ್ರದ್ಧೆಗಳಿಂದ ಎರಡೂ ಕೈಗಳಲ್ಲಿ ಹೊತ್ತು ನಿಧಾನವಾಗಿ ನೂತನ ಮಂದಿರದ ಪ್ರದಕ್ಷಿಣೆಯಲ್ಲಿ ಸಾಗತೊಡಗಿದರು.ಬಹುಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಕಾಷಾಯವಸ್ತ್ರಧಾರಿಗಳಾದ ಸಂನ್ಯಾಸಿಗಳು, ಶ್ವೇತವಸ್ತ್ರಧಾರಿ ಬ್ರಹ್ಮಚಾರಿಗಳು ಆ ಭಾವ



ಸಮಾವೇಶದಲ್ಲಿ ನೆರೆದಿದ್ದ ಸ್ವಾಮೀಜಿಯವರುಗಳು

ಚಿತ್ರಗಳ ಹಿಂದೆ ವೇದಘೋಷ, ಭಜನೆ, ನೃತ್ಯದಲ್ಲಿ ಸಾಗುತ್ತಿದ್ದ ದೃಶ್ಯ ಯಾರಲ್ಲೇ ಆಗಲಿ ಭಕ್ತಿ ಶ್ರದ್ಧೆಗಳನ್ನು ಉದ್ದೀಪನಗೊಳಿಸುತ್ತಿತ್ತು. ನೆರೆದಿದ್ದ ಭಕ್ತಸ್ತೋಮ ಉಚ್ಚಕಂಠದಲ್ಲಿ ಶ್ರೀರಾಮಕೃಷ್ಣ ದೇವಕೀ ಜೈ, ಶ್ರೀ ಶ್ರೀ ಮಹಾಮಾಯಿ ಕಿ ಜೈ, ಶ್ರೀ ಸ್ವಾಮೀಜಿ ಮಹಾರಾಜ್‌ಜೀ ಕಿ ಜೈ ಎಂದು ಮೊಳಗುತ್ತಿದ್ದ ಆ ಕೆಲವು ಕ್ಷಣಗಳು ಪುಣೆಯ ಇತಿಹಾಸದಲ್ಲಿ ಅವಿಸ್ಮರಣೀಯವಾದ ಪುಣ್ಯದ ಕ್ಷಣಗಳಾಗಿದ್ದುವು.

೨೧.೦೪.೨೦೦೨ರ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಪೂಜ್ಯ ಸ್ವಾಮಿ ರಂಗನಾಥಾನಂದಜಿಯವರು ವಹಿಸಿದ್ದರು. ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸ್ಮರಣಾನಂದಜಿಯವರು ಅಂದು ಮಾತನಾಡಿದರು. ಕೇಂದ್ರದ ಮಾನ್ಯ ಸಚಿವರಾದ ಶ್ರೀ ಅನಂತಕುಮಾರ್ ಅಂದು ಸಭೆಯನ್ನುದ್ದೇಶಿಸಿ ಮಾತನಾಡಿ ಒಂದು ವಿಶೇಷ ಅಂಚೆ ಕವರನ್ನೂ ನಾಲ್ಕು ಸ್ಟಾಂಪುಗಳನ್ನೂ ಬಿಡುಗಡೆ ಮಾಡಿದರು.

೨೨.೪.೨೦೦೨ರಂದು ನಡೆದ ಧರ್ಮಸಮ್ಮೇಳನದ ಅಧ್ಯಕ್ಷತೆಯನ್ನು ಸ್ವಾಮಿ ಪ್ರಭಾನಂದಜಿಯವರು ವಹಿಸಿದ್ದರು. ವಿವಿಧ ಧಾರ್ಮಿಕ ಮುಖಂಡರು ತಮ್ಮ ತಮ್ಮ ಧರ್ಮದ ಸಾರ್ವತ್ರಿಕ ಭಾವನೆಗಳನ್ನು ಕುರಿತು ಮಾತನಾಡಿದರು. ೨೩, ೨೪ ಮತ್ತು ೨೫ರಂದು ಹೊಸ ಸಭಾಂಗಣದಲ್ಲಿ ಸಾರ್ವಜನಿಕ ಸಭೆಗಳನ್ನು ಏರ್ಪಡಿಸಲಾಗಿತ್ತು.

ದೇಶದ ಬೇರೆ ಬೇರೆ ಭಾಗಗಳಿಂದ ಬಂದಿದ್ದ ಸುಮಾರು ೪೦೦೦ ಭಕ್ತರಿಗೆ ವಸತಿ ಸೌಕರ್ಯವನ್ನು ಹತ್ತಿರದ ವಿಶಾಲವಾದ ಭವನಗಳಲ್ಲಿ ಹಾಗೂ ಕಲ್ಯಾಣ ಮಂಟಪದಲ್ಲಿ ಮಾಡಲಾಗಿತ್ತು. ಊಟ, ತಿಂಡಿ, ಹಾಗೂ ವಾಹನ ಸೌಕರ್ಯಗಳನ್ನು ಅತ್ಯಂತ ಸಮರ್ಪಕವಾಗಿ ಮಾಡಲಾಗಿತ್ತು. ಒಟ್ಟು ಕಾರ್ಯಕ್ರಮದ ವಿಷಯವಾಗಿ ಎಲ್ಲರೂ ಬಾಯ್ತುಂಬ ಹೊಗಳುವವರೇ.